ದಿನಾಂಕಃ25.10.2024 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಸ್ ವಕೀಲರಿಂದಃ

ಸರ್ವೆ ನಂಬರ್ 60 ರಲ್ಲಿ 358.16 ಎಕರೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 60 ರ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ನನ್ನ ಜಮೀನಿನ ಬಗ್ಗೆ ಗೊತ್ತಿರುತ್ತದೆ. ದಾವಾ ಸ್ವತ್ತಿಗೆ ಸಂಬಂದಪಟ್ಟ ಈ ವರ್ಷದ ಪಹಣಿಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ. ಮುಳಬಾಗಿಲು ತಾಲ್ಲೂಕು ಕಛೇರಿಯಲ್ಲಿ 2 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಮುಳಬಾಗಿಲು ತಾಲ್ಲೂಕು ಸರ್ಕಾರಿ ನೌಕರರ ಅಧ್ಯಕ್ಷರಾಗಿರುತ್ತೇನೆ. ಗೋಮಾಳ ಸೇರಿಸಿಕೊಂಡು ಈಗ ಪಹಣಿ ಬರುತ್ತಿದೆ ಎಂದರೆ ಇರಬಹುದು. ಗೋಮಾಳವನ್ನು ಒಟ್ಟುಗೂಡಿಸಿ ಪಹಣಿ ಮಾಡಿ ಎಷ್ಟು ವರ್ಷ ಆಗಿದೆ ಎಂದರೆ 1 ವರ್ಷ. ನಾನು ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿರುವ ಕಾರಣ ಒಟ್ಟು ವಿಸ್ತೀರ್ಣದ ಬಗ್ಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಕೆವಿ.ಶ್ರೀನಿವಾಸಾಚಾರಿ ನನ್ನ ಅಣ್ಣ. ನಿಪಿ 7 ರಲ್ಲಿ ದಾವಾ ಸ್ವತ್ತಿನ ದಕ್ಷಿಣಕ್ಕೆ ಕೆ.ಆರ್. ವೆಂಕಟರಾಮಾಚಾರಿ ಎಂದು ತೋರಿಸಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕು ಬಂದಿಯ ಒಳಗೆ ಎಷ್ಟು ವಿಸ್ತೀರ್ಣ ಇರುತ್ತದೆ ಎಂದರೆ 2 ಎಕರೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ನನಗೆ ಸೇರಿದ ಸ್ವತ್ತು ಇರುವುದಿಲ್ಲ ಎಂದರೆ ಸರಿ. ಆದ ಕಾರಣ ನಿಪಿ 7 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ಮತ್ತು ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

3. ಒಎಸ್ ನಂಬರ್ 239/2010 ಯಾವಾಗ ಡಿಕ್ರಿಯಾಗಿರುತ್ತದೆ ಎಂದರೆ ದಿನಾಂಕ ಗೊತ್ತಿಲ್ಲ. 2013 ರಲ್ಲಿ ಡಿಕ್ರಿಯಾಗಿರುತ್ತದೆ ಎಂದರೆ ಇರಬಹುದು. ಸದರಿ ದಾವೆಯ ಸ್ವತ್ತಿನಲ್ಲಿ ಡಿಕೆ ನಾರಾಯಣಸ್ವಾಮಿರವರು ಸ್ವಾಧೀನದಲ್ಲಿರುತ್ತಾರಾ ಎಂದರೆ 1996 ರಿಂದ ಇರುತ್ತಾರೆ. ಡಿಕೆ ನಾರಾಯಣಸ್ವಾಮಿರವರು ಸ್ವಾಧೀನದಲ್ಲಿರುವ ಸ್ವತ್ತು ದಾವಾ ಸ್ವತ್ತಿನ ಯಾವ ದಿಕ್ಕಿಗೆ ಇದೆ ಎಂದರೆ ದಕ್ಷಿಣಕ್ಕೆ. ನಿಪಿ 7 ರಲ್ಲಿ ದಕ್ಷಿಣಕ್ಕೆ ಡಿಕೆ ನಾರಾಯಣಸ್ವಾಮಿರವರ ಜಮೀನನ್ನು ತೋರಿಸಿದ್ದೀರಾ ಎಂದರೆ ಇಲ್ಲ. ದಕ್ಷಿಣಕ್ಕೆ ಡಿಕೆ ನಾರಾಯಣಸ್ವಾಮಿರವರ ಸ್ವತ್ತು ಇರುವ ಕಾರಣ ಪ್ರತಿವಾದಿಗಳ ವಿರುದ್ಧ ದಾವೆ ಹೂಡಲು ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. 2015 ರಲ್ಲಿ ಪ್ರತಿವಾದಿಗಳು ನನ್ನ ಸ್ವತ್ತಿಗೆ ಯಾವ ರೀತಿ ತೊಂದರೆ ಕೊಟ್ಟಿರುತ್ತಾರೆ ಎಂದರೆ ದಕ್ಷಿಣದ ಕಡೆ ಕೀಲಾಗಾಣಿ ಗಡಿಯಲ್ಲಿರುವ ಜಮೀನಿನಲ್ಲಿ ಪ್ರತಿವಾದಿಗಳು ಇರುತ್ತಾರೆ.

4. ಪ್ರತಿವಾದ ಪತ್ರದಲ್ಲಿರುವ ಅಂಶಗಳ ಬಗ್ಗೆ ಖುದ್ದು ಮಾಹಿತಿ ಇರುತ್ತದೆ. ಸರ್ವೆ ನಂಬರ್ 60 ರಲ್ಲಿ ಪ್ರತಿವಾದಿಗಳ ತಂದೆ ಅನಧಿಕೃತವಾಗಿ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಪ್ರತಿವಾದಿಗಳಿಗೆ ಮಂಜೂರಾಗಿರುವ ಸ್ವತ್ತು ಮತ್ತು ಅವರ ತಂದೆ ಸ್ವಾಧೀನದಲ್ಲಿದ್ದ ಸ್ವತ್ತು ಬೇರೆ ಬೇರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಸ್ವಾಧೀನದಲ್ಲಿದ್ದ ಸ್ವತ್ತಿನಲ್ಲಿ ಬೋರ್ ವೆಲ್ ಮತ್ತು ಪಂಪ್ ಹೌಸ್ ಅನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ.

5. ಎಸ್ ವಿ ಭಾರ್ಗವ್ ನನ್ನ ಮಗ. ಪಿಎನ್ ವರಲಕ್ಷ್ಮಿ ನನ್ನ ಹೆಂಡತಿ. ಸಾಕ್ಷಿಗೆ ನಿಡಿ 6 ಅನ್ನು ತೋರಿಸಲಾಗಿ ಅದರಲ್ಲಿ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದರೆ 514 ಇರಬಹುದು. ಸರ್ವೆ ನಂಬರ್ 60 ದುರಸ್ಥಿಯಾಗಿದೆಯಾ ಎಂದರೆ ಆಗಿರುತ್ತದೆ. ನಾನು ಸರ್ಕಾರಿ ನೌಕರನಾಗಿರುವ ಕಾರಣ ಪಹಣಿಗಳನ್ನು ಸೃಷ್ಟಿಸಿ ದುರಸ್ಥಿಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 2 ಪಹಣಿಯನ್ನು ತಾಲ್ಲೂಕು ಕಛೇರಿಯವರು

ನೀಡಿರುತ್ತಾರೆ ಎಂದರೆ ಗ್ರಾಮಲೆಕ್ಕಾದಿಕಾರಿ ನೀಡಿರುತ್ತಾರೆ. ನಿಡಿ 2ರ ಪ್ರಕಾರ ಪ್ರತಿವಾದಿಗಳ ತಂದೆಯ ಹೆಸರಿನಲ್ಲಿ 2 ಎಕರೆ ನಮೂದಾಗಿರುತ್ತದೆ ಎಂದರೆ ಸರಿ.

6. ನಿಪಿ 9 ರಿಂದ 30 ಸ್ವತ್ತುಗಳಿಗೂ ಮತ್ತು ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಂದಾಯ ಅಧಿಕಾಯಾಗಿರುವ ಕಾರಣ ನ್ಯಾಯಾಲಯಕ್ಕೆ ಕಣ್ ತಪ್ಪಿಸಲು ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/–

(ಶ್ರೀಮತಿ ಸ್ನೇಹಾ ಎಂ.)

C/C ಪ್ರಧಾನ ಸಿಜೆ ಮತ್ತು ಜೆಎಂಎಫ್ ಸಿ

ಮುಳಬಾಗಿಲು